



ತನ್ನ ಎಂಟು ತಿಂಗಳ ಮಗುವನ್ನು ಕಾಲಮೇಲೆ ಮಲಗಿಸಿಕೊಂಡು ಮಣ್ಣೆ ತಿನ್ನಿಸುತ್ತಿದ್ದಳು. ಸಾಮಾನ್ಯವಾಗಿ ಮಗು ಮಣ್ಣೆ ತಿನ್ನುವಾಗ ಅದರ ಕೈಯಲ್ಲಿ ಘಲ್ ಘಲ್ ಶಬ್ದ ಮಾಡುವ ಗಿಲಿಗಿಲಿ ಇಲ್ಲವೇ ಮೃದುವಾದ ಆಟಿಕೆಗಳಿರುತ್ತವೆ. ಅಷ್ಟಾದರೂ ಮಕ್ಕಳು ಮಣ್ಣೆ ತಿನ್ನಲು ಇಷ್ಟವಿಲ್ಲದೆ ಅಳುವುದು, ಮುಖ ಮೂತಿ ಅತ್ತಿತ್ತ ತಿರುಗಿಸುವುದು ಸಾಮಾನ್ಯ. ಆದರೆ ಈ ಮಗು ಸ್ವಲ್ಪವೂ ಹಟ ಮಾಡದೆ ಉಣ್ಣುತ್ತಿತ್ತು. ಕಾರಣ ಅದರ ಕೈಯಲ್ಲಿನ ಮೊಬೈಲ್!

'ಇಷ್ಟು ಚಿಕ್ಕ ಮಗುವಿಗೆ ಮೊಬೈಲ್ ಕೊಡ್ತೀಯಾ?' ಎಂದೆ ನಾನು.

'ಅಕ್ಕ, ನನ್ನ ಮಗ ಸ್ವಲ್ಪ ಮಾಡರ್ನ್. ಅವನಿಗೆ ಮೊಬೈಲ್‌ನಲ್ಲಿ ಈ ಪಾಪ್ ಮ್ಯೂಸಿಕ್ ಹಾಕಿದರೆ ಮಾತ್ರ ಅವನು ಮಣ್ಣೆ ತಿನ್ನೋದು. ಮುಂದೆ ದೊಡ್ಡ ರಾಕ್ ಸ್ಟಾರ್ ಆಗ್ತಾನೇನೊ' ಎಂದು ನಕ್ಕು ನುಡಿದಳು.

ಮಕ್ಕಳಿಗೆ ಊಟ ಮಾಡಿಸುವುದು ಅನಾದಿ ಕಾಲದಿಂದಲೂ ಒಂದು ಸಾಹಸದ ಕೆಲಸವೇ! ನಮ್ಮ ಪುಟ್ಟ ಕೃಷ್ಣನೂ ಊಟ ಮಾಡುವಾಗ ತಾಯಿ ಯಶೋಧೆಗೆ ಸಾಕಷ್ಟು ಕಾಟ ಕೊಟ್ಟಿರಬೇಕು. ಅವಳು ಅದಕ್ಕೆ 'ನೀನು ಉಣ್ಣದಿದ್ದರೆ ಗುಮ್ಮನ ಕರೆಯುತ್ತೇನೆ ನೋಡು' ಎಂದು ಹೆದರಿಸಿರಬೇಕು. ಹೀಗಾಗಿಯೇ 'ಗುಮ್ಮನ ಕರೆಯದಿರೆ...' ಎಂದು ದಾಸರ ಪದ ಹುಟ್ಟಿರಬೇಕು ಅನಿಸುತ್ತದೆ.

ಆಗಷ್ಟೇ ಎದೆಹಾಲು ಬಿಟ್ಟಿರುವ ಅಥವಾ ಇನ್ನೂ ಎದೆಹಾಲು ಕುಡಿಯುತ್ತಿರುವ ಮಕ್ಕಳಿಗೆ ಮೇಲಿನ ಆಹಾರ ರುಚಿಸುವುದಿಲ್ಲ. ಹೀಗಾಗಿ ಮಕ್ಕಳಿಗೆ ಊಟ ಮಾಡಿಸಲು ತಾಯಂದಿರು ಏನೇನೋ ತಂತ್ರಗಾರಿಕೆ ಹೆಣೆಯಬೇಕಾಗುತ್ತದೆ. ಮಗುವಿನ ಮುಂದೆ ರಾಶಿ ಆಟಿಕೆಗಳನ್ನು ಸುರಿದು ಮಗು ಒಂದೊಂದೇ ಆಟಿಕೆಯೊಂದಿಗೆ ಆಟವಾಡುವಂತೆ ಮಾಡಿಯೋ ಅಥವಾ ಯಾವುದಾದರೊಂದು ಕಥೆ ಹೇಳಿಯೋ ಅದು ಮೈಮರೆಯುವಂತೆ ಮಾಡಿ ಊಟ ಮಾಡಿಸಬೇಕು.

'ಎಲ್ಲಿ ಬಾಯಿ ಆ ಮಾಡು ಕಂದ!. ಎಷ್ಟು ದೊಡ್ಡಕೆ ಬಾಯಿ ತೆಗೀತೀಯಾ ನೋಡೋಣ?' ಎಂತಲೋ, 'ಇದು ಅಪ್ಪನ ತುತ್ತು', 'ಇದು ಅಮ್ಮನ ತುತ್ತು', 'ಇದು ಅಜ್ಜನ ತುತ್ತು' ಎಂದು ಒಂದೊಂದು ತುತ್ತಿಗೂ ಮನೆಯ ಒಬ್ಬೊಬ್ಬರೇ ಸದಸ್ಯರ ಹೆಸರು ಹೇಳುತ್ತಲೋ ಅಂತೂ ಇಂತೂ ಬಟ್ಟಲಲ್ಲಿ ಕಲಸಿಕೊಂಡು ಬಂದ ಊಟ ಖಾಲಿಯಾದರೆ ಆ ತಾಯಿಗೆ ಆ ಹೊತ್ತಿನ ದೊಡ್ಡದೊಂದು ಕೆಲಸ ಮುಗಿದಂತೆನಿಸಿ ಮನಸಿಗೆ ಏನೋ ಒಂದು ರೀತಿಯ ಸಮಾಧಾನ.

ಇನ್ನು ಕೆಲವು ಅಮ್ಮಂದಿರು ಮಗುವಿಗೆ ಊಟ ಮಾಡಿಸಲು ಅಂಗಳಕ್ಕೇ ಬರಬೇಕಾಗುತ್ತದೆ. ರಾತ್ರಿಯ ಹೊತ್ತಾದರೆ ಚಂದಮಾಮನನ್ನು ತೋರಿಸುತ್ತಲೊ, ಮಧ್ಯಾಹ್ನದ ಹೊತ್ತಲ್ಲಾದರೆ ಮನೆಯ ಮುಂದಿನ ಕೈತೋಟದ ಹೂಗಿಡಗಳನ್ನು ತೋರಿಸುತ್ತಲೊ, ಚಿಟ್ಟೆ, ಕಾಗೆ, ನಾಯಿ, ಬೆಕ್ಕುಗಳನ್ನು ತೋರಿಸುತ್ತಲೊ 'ಅದು ಕಾಗೆ... ಕಾಗೆ ಹೇಗೆ ಕೂಗುತ್ತೆ?', 'ಅಲ್ಲಿ ನೋಡು ಬೌಬೌ, ಇಲ್ಲಿ ನೋಡು ಮಿಯಾಂವ್ ಬೆಕ್ಕು ಮರಿ...' ಎಂದೆಲ್ಲ ಮಗುವಿಗೆ ತನ್ನ ಸುತ್ತಮುತ್ತಲಿನ ಪ್ರಾಣಿಪಕ್ಷಿಗಳ ಪರಿಚಯ ಮಾಡಿಸುತ್ತಾ ಉಣ್ಣಿಸುತ್ತಿದ್ದರೆ ಆಟದ ಜೊತೆಗೆ ಮಗುವಿಗೆ ಪಾಠವೂ ಸಿಗುತ್ತಿತ್ತು. ಮನೆಯ ಮುಂದೆ ರಸ್ತೆ ಮೇಲೆ ತಿರುಗಾಡುವ ಮನುಷ್ಯರನ್ನು, ವಾಹನಗಳನ್ನು, ದನಗಳನ್ನು ತೋರಿಸುತ್ತಾ 'ಅಲ್ಲಿ ನೋಡು ಅಂಬಾ...', 'ಅಲ್ಲಿ ನೋಡು ಮಾಮಾ, ಅತ್ತೆ... ಎಲ್ಲಿ ಬಾಯಿ ಆ ಮಾಡು...' ಎಂದು ಮಗುವಿನೊಂದಿಗೆ ಮೆಲುವಾಗಿ ಮಾತನಾಡುತ್ತಾ ಉಣ್ಣಿಸುತ್ತಿದ್ದರೆ ಇನ್ನೂ ಮಾತು ಬಾರದ ಮಕ್ಕಳು ನಿಧಾನಕ್ಕೆ 'ಬೌಬೌ', 'ಮಾಮಾ' ಎಂದೆಲ್ಲ ನಿಧಾನವಾಗಿ ಕಲಿಯತೊಡಗುತ್ತಿದ್ದವು.

ಈ ಯಾವ ತಂತ್ರಗಾರಿಕೆ ಕೆಲಸ ಮಾಡದಿದ್ದರೆ ಕೊನೆಯ ಅಸ್ತ್ರವಾಗಿ ಅಮ್ಮಂದಿರು 'ನೀ ಮಮ್ಮು ಊಟ ಮಾಡದಿದ್ದರೆ ನಾನು ಗುಮ್ಮನ ಕರೀತೀನಿ ನೋಡು. ಆಮೇಲೆ ಗುಮ್ಮಣ್ಣ ಬಂದು ಹಿಡ್ಕೊಂಡು ಹೋಗ್ತಾನೆ' ಎಂದು ಹೆದರಿಸಿಯಾದರೂ ಊಟ ಮಾಡಿಸುತ್ತಿದ್ದರು.

ಇದು ಸ್ಮಾರ್ಟ್‌ಫೋನ್ ಯುಗ! ಎಲ್ಲದಕ್ಕೂ ಮೊಬೈಲ್‌ಗೆ ಮೊರೆಹೋಗುವ ಜನರ ನಡುವೆ ಈಗ ತಾಯಂದಿರು ಕೂಡ ತಮ್ಮ ಪುಟಾಣಿ ಕಂದಮ್ಮಗಳಿಗೆ ಊಟ ಮಾಡಿಸಲು ಮೊಬೈಲ್ ಹಿಡಿಯುತ್ತಿರುವುದು ಆತಂಕದ ವಿಷಯ!

ಮೊಬೈಲ್ ಮೇಲಿನ ಆಕರ್ಷಣೆ ನಿಧಾನಕ್ಕೆ ಗೀಳಾಗುವ ಎಲ್ಲಾ ಸಾಧ್ಯತೆಯೂ ಇದೆ. ಇದು ಮಕ್ಕಳ ಮನಸ್ಸಿನ ಮೇಲೆ, ಅವರ ಬೆಳವಣಿಗೆಯ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತದೆ ಎಂಬುದು ತಿಳಿದಿದ್ದರೂ ಅದರ ಗಂಭೀರತೆ ಬಗ್ಗೆ ತಲೆ ಕೆಡಿಸಿಕೊಳ್ಳದೆ ಮಕ್ಕಳ ಕೈಗೆ ಮೊಬೈಲ್ ಕೊಡುವ ಅಮ್ಮಂದಿರು ಕಡಿಮೆಯೇನಲ್ಲ.

ಪ್ರಪಂಚಕ್ಕೆ ಕಾಲಿಟ್ಟ ಕೆಲ ವರ್ಷಗಳಲ್ಲೇ ಮಕ್ಕಳನ್ನು ತಮ್ಮ ಸುತ್ತಲಿನ ಪರಿಸರದ ಒಂದಷ್ಟು ವಸ್ತು ವೈವಿಧ್ಯಗಳ ಪರಿಚಯ ಮಾಡಿಸದೆ, ಈ ಲೋಕವನ್ನು ಅದು ಬೆರಗುಗಣ್ಣುಗಳಿಂದ ನೋಡಿ ಮುದಗೊಳ್ಳಲು ಬಿಡದೆ, ಸಹಜ ಕುತೂಹಲದಿಂದ 'ಅದೇನು? ಇದೇನು?' ಎಂದು ತನ್ನ ತಾಯಿ ತಂದೆಯನ್ನು ಕೇಳಲು ಅನುವು ಮಾಡಿಕೊಡದೆ ಅದನ್ನು ಮೊಬೈಲ್ ಪ್ರಪಂಚದಲ್ಲಿ ಮುಳುಗಿಸಿ ಹೆತ್ತವರು ತಾವಾಗಿಯೇ ತಮ್ಮ ಮಕ್ಕಳನ್ನು ಮೊಬೈಲ್ ಗೀಳಿಗೆ ಒಳಪಡಿಸುವುದು ಎಷ್ಟು ಸಮಂಜಸ? ಈ ಮೊಬೈಲ್ ಗುಮ್ಮನಿಂದ ಬಿಡಿಸಿಕೊಳ್ಳುವುದಾದರೂ ಯಾವಾಗ? ■